ನಿಲುವಳಿ ಸೂಚನೆಗೆ ಆಕಸ್ಮಾತ್ ತಾವು ಒಪ್ಪಿಗೆ ಕೊಟ್ಟಿದ್ದರೆ ಅವರ್ಯಾರು ಮಾತನಾಡಲಿಕ್ಕೆ ಅವಕಾಶವಿರುತ್ತಿರಲಿಲ್ಲ ನಿಲುವಳಿ ಸೂಚನೆಗೆ ಸಹಿ ಮಾಡಿದವರಿಗೆ ಮಾತ್ರ ಇರುತ್ತಿತ್ತು ಅದಕ್ಕೆ tit for tat ರೀತಿಯಲ್ಲಿ ಭಾರಿ ಜಾಣತನವನ್ನು ಮಾಡಿದ್ದಾರೆ, ಇರಲಿ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ – ಆ ವಿಚಾರವೇ ನಮ್ಮಲ್ಲಿ ಇಲ್ಲ, not at all

ಶ್ರೀ ವಾಟಾಳ್ ನಾಗರಾಜ್ – ಅದರ ಬಗ್ಗೆ ನಮ್ಮಲ್ಲಿ ಭೇದಭಾವವೇ ಇಲ್ಲ ಹಾಗಾಗಿ ಆ ಬಗ್ಗೆ ಮಾನ್ಯ ಪ್ರಕಾಶ್‌ರವರು ನಮ್ಮನ್ನು ಬೇರೆ ಮಾಡತಕ್ಕಂಥ ವ್ಯವಸ್ಥೆ ಆಗುವುದು ಬೇಡ

ಅಧ್ಯಕ್ಷರು – ಈಗ ಆಯಿತು ಬಿಡಿ, ಅವೆಲ್ಲಾ ಮುಕ್ತಾಯವಾಯಿತಲ್ಲ, ಈಗ ಯಾರು ಮಾತನಾಡುವವರು ದಯಮಾಡಿ ಮಾತನಾಡಿ

ಶ್ರೀ ಜೆ ಸಿ ಮಾಧುಸ್ವಾಮಿ – ನಾನು ಮಾತನಾಡುತ್ತಿದ್ದೆ, 15 ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ

ಅಧ್ಯಕ್ಷರು – ಈಗ ತಮ್ಮ ಭಾಷಣದ ನಂತರ ರಾಜ್ಯಪಾಲರ ವಂದನಾ ನಿರ್ಣಯವನ್ನು ಮೂವ್ ಮಾಡಿಸಿಬಿಡುತ್ತೇನೆ

ಶ್ರೀ ಜೆ ಸಿ ಮಾಧುಸ್ವಾಮಿ – ಈಗಲೇ ಮೂವ್ ಮಾಡಿಸಿ ಸರ್, ಆಮೇಲೆ ಮಾತನಾಡುತ್ತೇನೆ

ಅಧ್ಯಕ್ಷರು – ಸರಿ ಈಗಲೇ ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆಯ ಪ್ರಸ್ತಾಪವನ್ನು ವಿಶ್ವೇಶ್ವರ ಹೆಗಡೆ ಕಾಗೇರಿಯವರು ಮೂವ್ ಮಾಡುತ್ತಾರೆ, ಆ ನಂತರ ಮಾಧುಸ್ವಾಮಿಯವರು ಮಾತನಾಡಲಿ

6 ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) – ``2007 ರ ಜನವರಿ 25 ರಂದು ವಿಧಾನಮಂಡಲದ ಉಭಯ ಸದನಗಳ ಸದಸ್ಯರುಗಳನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಸಭೆಯ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇನೆ ಎಂದು ಸೂಚಿಸುತ್ತೇನೆ``

ಶ್ರೀ ಕ್ಯಾತ್ಸಂದ್ರ ರಾಜಣ್ಣ (ಬೆಳ್ಳಾವಿ) ಮಾನ್ಯ ಅಧ್ಯಕ್ಷರೇ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಸೂಚಿಸಿದ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವವನ್ನು ಅನುಮೋದಿಸುತ್ತೇನೆ

ಅಧ್ಯಕ್ಷರು ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು – ಮಾಧುಸ್ವಾಮಿಯವರೇ, ಕುಮಾರ್ ಬಂಗಾರಪ್ಪನವರು urgent ಆಗಿ ಶೂನ್ಯವೇಳೆ ಕೇಳುತ್ತೇನೆಂದು ಹೇಳುತ್ತಿದ್ದಾರೆ

ಶ್ರೀ ಜೆ ಸಿ ಮಾಧುಸ್ವಾಮಿ – ಆಗಬಹುದು

7 ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯಗಳು

ವಿಷಯ ಅ) ಜನವರಿ 2007 ದಿನಾಂಕ 13 ರಿಂದ 22 ರವರೆಗೆ ಸೊರಬದಲ್ಲಿ ನಡೆದ ಎನ್ ಎಸ್ ಎಸ್ ಕ್ಯಾಂಪ್ ಸಂಬಂಧದಲ್ಲಿ ಸೊರಬ ಸರ್ಕಲ್ ಇನ್ಸಪೆಕ್ಟರ್‌ರವರ ಅಸಭ್ಯ ವರ್ತನೆ, ದಬ್ಬಾಳಿಕೆ ಬಗ್ಗೆ

ಶ್ರೀ ಎಸ್ ಕುಮಾರ್ ಬಂಗಾರಪ್ಪ (ಸೊರಬ) – ದಿನಾಂಕ 13 ರಿಂದ 22ನೇ ದಿನಾಂಕದವರೆಗೆ ಒಂದು ಎನ್ ಎಸ್ ಎಸ್ ಕ್ಯಾಂಪ್ ನಮ್ಮ ತಾಲ್ಲೂಕಿನಲ್ಲಿ ನಡೆಯಿತು 22ನೇ ದಿನಾಂಕದಂದು ಗುದ್ದಲಿ, ಪಿಕಾಸಿ ಎಲ್ಲಾ ಸಾಮಗ್ರಿಗಳನ್ನು ಹಾಕಿ ಊರಿನವರೆಲ್ಲಾ ಸೇರಿ ಮಕ್ಕಳನ್ನೆಲ್ಲರನ್ನು ಊರಿನಿಂದ ಬೀಳ್ಕೊಟ್ಟೆವು ನಂತರ ವಾಪಸ್ಸು ಬರಬೇಕಾದರೆ ಆ ತಾಲ್ಲೂಕಿನ ಸರ್ಕಲ್ ಇನ್ಸ್‌ಪೆಕ್ಟರ್ ಆ ಲಾರಿಯನ್ನು ನಿಲ್ಲಿಸಿ ಆ ಹುಡುಗರ ಸಮೇತ ಎಲ್ಲರನ್ನು ಸ್ಟೇಷನ್ನಿಗೆ ಕರೆದುಕೊಂಡು ಹೋಗಿ ಇಟ್ಟುಕೊಂಡರು ನಂತರ ಗ್ರಾಮಸ್ಥರು ಸ್ಟೇಷನ್ನಿಗೆ ಹೋಗಿ ಇದು ಎನ್ ಎಸ್ ಎಸ್ ಕ್ಯಾಂಪ್‌ನಿಂದ ನಡೆಯುತ್ತಿರುವುದು ಎಂದು ವಿನಂತಿಸಿದರು ಅಲ್ಲಿ ಬಸ್ಸಿನ ಸೌಕರ್ಯ ಇಲ್ಲದಿರುವುದರಿಂದ ಸೊರಬದಿಂದ 3–4 ಕಿ ಮೀ interior ನಲ್ಲಿರುವ ಒಂದು ಹಳ್ಳಿಯಿಂದ ಆ ಲಾರಿ ಹೋಗುತ್ತಿತ್ತು ಏಕಾಏಕಿ ಆ ಸರ್ಕಲ್ ಇನ್ಸ್‌ಪೆಕ್ಟರ್ ಹೋಗಿ ಗ್ರಾಮದ ಅಧ್ಯಕ್ಷರ ಮೇಲೆ ಹಲ್ಲೆ ಮಾಡಿ ಅವರಿಗೆ ಅಸಾಲ್ಟ್ ಕೂಡ ಮಾಡಿದರು ಅಸಾಲ್ಟ್ ಮಾಡಿದ ಮೇಲೆ ಗ್ರಾಮಸ್ಥರೆಲ್ಲಾ ಪಕ್ಷಾತೀತವಾಗಿ ಹೋಗಿ ಸರ್ಕಲ್ ಇನ್ಸ್‌ಪೆಕ್ಟರ್‌ರವರ ಅಸಭ್ಯ ವರ್ತನೆ, ದಬ್ಬಾಳಿಕೆ ಮಾಡುತ್ತಿರುವುದಕ್ಕೆ ಅವರ ಮೇಲೆ ಪ್ರತಿಭಟನೆ ಮಾಡಿದರು ಈ ಕ್ಷಣದಲ್ಲಿಯೂ ಸಹ ಆಟೋರಿಕ್ಷಾದವರು, ಟೆಂಪೋದವರು, ರೈತರು,